

**ಕಾಯಿನ್ ಏಜ್:** ನಾಣ್ಯಗಳ ಮಾದರಿ ಬಳಸಿ ನಿರ್ಮಿಸಿದ ಈ ಕಲಾಕೃತಿ ಮಣಿಪಾಲದ ಯುಪಿಎಂ ವೃತ್ತದಲ್ಲಿದೆ.

ರಚನೆ, ಅವುಗಳಲ್ಲಿ ಬಳಕೆಯಾಗುವ ಸಾಮಗ್ರಿ, ಶಿಲ್ಪಕಲೆಗೂ ಇತರ ಮಾಧ್ಯಮಗಳಿಗೂ ಇರುವ ಸಹಸಂಬಂಧ, ಶಿಲ್ಪಕಲೆಯನ್ನು ನೋಡುವ ಬಗೆ, ನೋಡುಗರ ಪ್ರತಿಕ್ರಿಯೆಗಳಿಂದ ಕಲಾವಿದರು ಪಡೆದುಕೊಳ್ಳುವ ಪ್ರೇರಣೆ, ಶಿಲ್ಪಕಲಾ ಪ್ರದರ್ಶನದ ವ್ಯವಸ್ಥೆ, ಕಲಾಶಿಕ್ಷಣದ ಸಮಸ್ಯೆ ಮತ್ತು ಸಾಧ್ಯತೆ, ಮಾಹಿತಿ ಮತ್ತು ಸೃಜನಶೀಲತೆಗಳ ನಡುವಿನ ವ್ಯತ್ಯಾಸ, ಸಂಪ್ರದಾಯ ಅಥವಾ ಪರಂಪರೆಗಳ ಜತೆ ಅನುಸಂಧಾನ ಮಾಡುವ ಸವಾಲು, ಕಲಾಸೃಷ್ಟಿಯಲ್ಲಿ ಸ್ಥಳೀಯತೆ ಮತ್ತು ಜಾಗತಿಕತೆಗಳ ನಡುವಿನ ಘರ್ಷಣಾತ್ಮಕ ಸಂಬಂಧ, ವ್ಯವಸ್ಥೆಯ ಒಳಗಿದ್ದೇ ಅದರ ವಿಕಾರಗಳನ್ನು ಬಿಂಬಿಸುವ ಪ್ರತಿರೋಧದ ಸುಪ್ತ ವಿಧಾನ, ಮುಂತಾದ ಹಲವು ಸಂಗತಿಗಳ ಪ್ರಸ್ತಾಪ ಇಲ್ಲಿದೆ. ಅವರು ಹಲವು ದೇಶಗಳಲ್ಲಿ ಪಡೆದ ಅನುಭವ ಗಳಿಸಿದ ತಿಳಿವು, ಜೀವಿಗಳ ಸಂಕಟಗಳಿಗೆ ಮಿಡಿವ ಮನಸ್ಸು, ಸಂಪ್ರದಾಯದೊಂದಿಗೆ ಗುದ್ದಾಡುತ್ತಲೇ ಹೊಸತನ್ನು ಹುಟ್ಟಿಸುವ ಕಸುವು, ಕೃತಕ ಬುದ್ಧಿಮತ್ತೆ ಬಗೆಗಿನ ಬೆರಗು ಮತ್ತು ಆತಂಕ, ಇಲ್ಲಿನ ಚರ್ಚೆಗೆ ಹೊಸ ಒಗರನ್ನು ಒದಗಿಸಿದೆ. ಕನ್ನಡದಲ್ಲಿ ಭಾಷೆಯನ್ನು ದುಡಿಸಿಕೊಂಡು ಹುಟ್ಟುವ ಸಾಹಿತ್ಯದ ತಾತ್ವಿಕ ಚರ್ಚೆ ವ್ಯಾಪಕವಾಗಿದೆ. ಆದರೆ, ಬಣ್ಣ, ಅಭಿನಯ, ನಾದ, ಕ್ಯಾಮೆರಾ ಇತ್ಯಾದಿಗಳನ್ನು ಬಳಸಿಕೊಂಡು ಹುಟ್ಟುವ ನಟನೆ, ನೃತ್ಯ, ಸಂಗೀತ, ಚಿತ್ರಕಲೆ, ಫೋಟೊಗ್ರಫಿಗಳ ಮೀಮಾಂಸೆಗಳು ಅಷ್ಟು ಪ್ರಮಾಣದಲ್ಲಿಲ್ಲ. ಇದ್ದರೂ ಅವು ಪರಸ್ಪರ ಒಡನಾಡದೆ ಪ್ರತ್ಯೇಕ ಜಗತ್ತುಗಳಂತಿವೆ. ಈ ಹಿನ್ನೆಲೆಯಲ್ಲಿ ವಿವಿಧ ಕಲಾಮಾಧ್ಯಮಗಳಲ್ಲಿ ಇರುವವರು, ತಮ್ಮ ಅನುಭವ ಮತ್ತು ಚಿಂತನೆಯನ್ನು ಹಂಚಿಕೊಳ್ಳುವಿಕೆ ಹೆಚ್ಚಾಗಬೇಕು. ಇದು ಕಲಾಮಾಧ್ಯಮಗಳಲ್ಲಿ ಹೊಸ ಸಂಬಂಧ ಬೆಸೆಯಬಹುದು. ಈ ದಿಸೆಯಲ್ಲಿ ತಲ್ಲೂರರ ಇಲ್ಲಿನ ಚಿಂತನೆಗಳು ಕೈದೀವಿಗೆಯಂತಿವೆ.

●